ಅನ್ನೋದು ನೆನಪೇ ಆಗಲಿಲ್ಲ ಎಂದು ಪೇಚಾಡಿದ.

'ಏ ದೋಸ್ತ, ಸುಹಾಸ ನಮ್ ಹುಡಗ, ಜಂಟಲ್‌ಮನ್ ಅದಾನ. ಜರ್ನಲಿಸಂನ್ಯಾಗ ಎಂ.ಎ ಮಾಡ್ಯಾನ. ಪಿಎಚ್.ಡಿಗೂ ಹೆಸರು ರಿಜಿಸ್ಟ್ರೇಷನ್ ಮಾಡಿಸ್ಯಾನಂತ. ಅವ್ನ ಮುಂಬೈದಾಗ ಇಂಗ್ಲಿಷ್ ಚಾನಲ್ ಒಂದಕ್ಕ ಟ್ರೈನಿ ರಿಪೋರ್ಟರ್ ಆಗಿದ್ದ. ನೌಕರಿ ಬಿಟ್ಟು ಬಂದಾನ. ಇಲ್ಲಿರಾಕ ಅವಂಗೊಂದು ಖೋಲಿ ಬೇಕಾಗದ. ನಿಮ್ಮ ಏರಿಯಾದಾಗ ಅಟ್ಯಾಚ್ಡ್ ಬಾತ್‌ರೂಂ ಇರೋ ಚಲೋ ಖೋಲಿ ಇದ್ದರೆ ಕೊಡಸೋ ಮಾರಾಯಾ...' ಎಂದು ಮೂರು ತಿಂಗಳ ಹಿಂದೆ ಪಾಟೀಲ ಕೇಳಿದ್ದು ನೆನಪಾಯಿತು. ಅವನು ಹೇಳಿದ ಅಂತ ರಾಜೀವ ತನ್ನ ಮನೆಯ ಮೇಲಿನ ಸಿಂಗಲ್ ಬೆಡ್‌ರೂಮಿನ ಮನೆಯನ್ನು ಸುಹಾಸನಿಗೆ ಕೊಟ್ಟಿದ್ದ. ತಿಂಗಳ ಪಹಿಲಾ ದಿನ ಬಾಡಿಗಿ ಕೊಡ್ತಾನ. ಅದಕ್ಕ ನಾ ಗ್ಯಾರಂಟಿ ಎಂದು ಪಾಟೀಲ ಹೇಳಿದ್ದೂ ನೆನಪಾಯಿತು. ಎತ್ತರದ ನೀಳ ದೇಹದ ಬೆಳ್ಳನೆಯ ಹುಡುಗ ಸುಹಾಸನಿಗೆ ಆತ್ಮಹತ್ಯೆ ಮಾಡಿಕೊಳ್ಳುವಂಥದ್ದು ಏನಾಗಿತ್ತು? ಹಮ್ಮುಬಿಮ್ಮು ಇಲ್ಲದ ಸರಳ ಹುಡುಗ. ಮೊದಲ ಸಲ ಭೇಟಿಗೆ ಬಂದಾಗ ನಿಂತೇ ಇದ್ದ. ಕುಳಿತುಕೊಳ್ಳಿ, ಇಲ್ಲವಾದರೆ ನೀವು ಹೋಗಬಹುದು ಎಂದು ಹೇಳಿದ ಮೇಲೆ ಕೂತು ಮುಗಳ್ನಕ್ಕಿದ್ದ. ಅವನ ನಗುವಿನಲ್ಲಿ ಆಕರ್ಷಣೆ ಇತ್ತು. ಅವನು ಮನೆಗೆ ಬರುವುದು, ಹೊರ ಹೋಗುವುದು ಗೊತ್ತೇ ಆಗುತ್ತಿರಲಿಲ್ಲ. ಬಾಡಿಗೆ ಹಣ ಕೊಡಲು ಬಂದಾಗಲೂ ಅಷ್ಟೇ. ಹೆಚ್ಚಿನ ಮಾತಿಲ್ಲ. ಆತ್ಮಹತ್ಯೆ ಮಾಡಿಕೊಳ್ಳುವಂತದ್ದು ಏನಾಗಿತ್ತು? ಗರ್ಲ್ ಫ್ರೆಂಡ್ ಕೈಕೊಟ್ಟಿರಬಹುದೇ? ಸಾಲ ಮಾಡಿ ತೀರಿಸಲು ಆಗದೆ ಜೀವ ಕಳೆದುಕೊಂಡನೇ? ಕುಟುಂಬದ ಆಸ್ತಿ ಕೈತಪ್ಪಿ ಹೋಗುತ್ತೆ ಅನ್ನೋ ಭಯವಿತ್ತೇ? ಅಥವಾ ಹೇಳಿಕೊಳ್ಳಲಾಗದ ಕಾಯಿಲೆ ಇತ್ತೇ? ಮೊದಲೇ ಮುಂಬೈಯಲ್ಲಿ ಇದ್ದು ಬಂದವ ಎಂದೆಲ್ಲ ಇದ್ದದ್ದು, ಇಲ್ಲದ್ದನ್ನೆಲ್ಲ ಕಲ್ಪಿಸಿಕೊಂಡು ರಾಜೀವನ ತಲೆ ಕೆಟ್ಟುಹೋಯಿತು.

'ಸುಹಾಸನ ಕುಟುಂಬದವರು ಎಲ್ಲಿದ್ದಾರೆ ಅನ್ನೋದು ಗೊತ್ತಾಗಲಿಲ್ಲ ಭಂಡಾರಿ ಕೈಚೆಲ್ಲಿದರು. ನೀನು ಪತ್ರಕರ್ತ. ಒಂದ್ಸೆಜ್ಜೆ ರಾಯಭಾಗಕ್ಕೆ ಹೋಗಿ ಸುಹಾಸನ ಅಪ್ಪ, ಅಮ್ಮನ್ನ ಪತ್ತೆ ಮಾಡಲು ನಿನ್ನಿಂದ ಸಾಧ್ಯ ಎಂದು ಭಂಡಾರಿ, ರಾಜೀವನ ಮುಖ ನೋಡುತ್ತಾ ಹೇಳಿದರು.

ರಾಜೀವ ರಾಯಭಾಗಕ್ಕೆ ಬಂದಾಗ ಬೆಳಗಿನ ಐದೂವರೆ. ಸುಹಾಸನ ಹಿನ್ನೆಲೆಯನ್ನು ಪತ್ತೆ ಹಚ್ಚುವ ಕೆಲಸವನ್ನು ಎಲ್ಲಿಂದ ಶುರು ಮಾಡಬೇಕು ಎನ್ನುವ ಬಗ್ಗೆ ಅವನು ಯೋಚಿಸಿರಲಿಲ್ಲ. ಲೋಕಲ್ ಪತ್ರಕರ್ತರನ್ನು ಕೇಳಿದರೆ ಏನಾದರೂ ಸುಳಿವು ಸಿಕ್ಕಬಹುದು ಅನ್ನಿಸಿತ್ತು. ಆದರೆ, ಅವರು ಸುಹಾಸನ ಸಾವನ್ನು ಸುದ್ದಿ ಮಾಡುವ ಸಾಧ್ಯತೆ ಇದೆ ಅನ್ನಿಸಿತು. ತಹಸೀಲ್ದಾರ್ ಆಫೀಸಿನಲ್ಲಿ ವಿಚಾರಿಸಿದರೆ ಮಾಧವರಾವ್ ರಾನಡೆ ಮನೆತನದವರ ಬಗ್ಗೆ ಏನಾದರೂ ಗೊತ್ತಾಗಬಹುದು. ಒಂದು ಸಣ್ಣ ಮಾಹಿತಿ ಸಿಕ್ಕರೂ ಸಾಕು ಸುಹಾಸನ ಸಂಬಂಧಿಕರನ್ನು ಪತ್ತೆ ಮಾಡುವ ವಿಶ್ವಾಸ ರಾಜೀವನಿಗೆ ಇತ್ತು.

'ನಮ್ಮ ರೆಗ್ಯುಲರ್ ಸಾಹೇಬರು, ಪೈಲ್ಸ್ ಆಪರೇಷನ್ ಮಾಡಿಸಿಕೊಳ್ಳಾಕ ಬೆಳಗಾವಿಗೆ ಹೋಗ್ಯಾರ. ನೀವು ಇನ್‌ಚಾರ್ಜ್ ಸಾಹೇಬನಿಗೆ ಒಂದ್ ಅರ್ಜಿ ಕೊಡ್ರಿ...' ಎಂದು ಟಪಾಲ್ ಸೆಕ್ಷನ್ನಿನ ಗುಮಾಸ್ತ ಹೇಳಿದ. 'ಅಗೋ ಅಲ್ಲಿ ಕಾಣ್ತದಲ್ಲ, ಅದೇ ಡೆಪ್ಯೂಟಿ ತಹಸೀಲ್ದಾರ್ ಸಾಹೇಬನ ಖೋಲಿ. ರೆಕಾರ್ಡ್ ರೂಮಿಗೂ ಅವರ ಇನ್‌ಚಾರ್ಜ್ ಅದಾರ' ಎಂದು ಗುಮಾಸ್ತ ಹೇಳಿದ. ಅವನು ತನ್ನ ಸಾಹೇಬರ ಬಗ್ಗೆ ಏಕವಚನ ಮತ್ತು ಬಹುವಚನ ಎರಡನ್ನೂ ಬಳಸಿದ್ದನ್ನು ಕೇಳಿ ರಾಜೀವನಿಗೆ ಆಶ್ಚರ್ಯವಾಯಿತು.

'ರಾಯಭಾಗ ತಾಲ್ಲೂಕಿನ ಮಾಧವರಾವ್ ರಾನಡೆ ಹೆಸರಿನ ಜಮೀನುದಾರರ ವಿವರಗಳು ತುರ್ತಾಗಿ ಬೇಕಾಗಿವೆ. ಅವರ ಮಗ ಎಸ್. ರಾನಡೆ ಅನ್ನೋರು ಬೆಂಗಳೂರಿನಲ್ಲಿ ಮೃತಪಟ್ಟಿದ್ದಾರೆ. ಅವರ ವಾರಸುದಾರರನ್ನು ಸಂಪರ್ಕ ಮಾಡಲು ನಾನು ಬಂದಿದ್ದೀನಿ. ದಯವಿಟ್ಟು ಮಾಹಿತಿ ಕೊಡಿ...' ಎಂದು ಅರ್ಜಿಯಲ್ಲಿ ಬರೆದು ಇನ್‌ಚಾರ್ಜ್ ತಹಸೀಲ್ದಾರ್‌ಗೆ ಕೊಟ್ಟ.

'ರಾಯಭಾಗ ತಾಲ್ಲೂಕಿನ ಮಾಧವರಾವ್ ರಾನಡೆ ಅಂತಷ್ಟೇ ಬರೆದರ ನಮಗರ ಹ್ಯಾಂಗ ಗೊತ್ತಾಗಬೇಕ್ರಿ? ಅವ್ರು ಯಾವ ಊರವರು ಅನ್ನೋದು ಪತ್ತೆ ಹಚ್ಚೋದು ಹ್ಯಾಂಗ? ಒಂದು ಕೆಲ್ಸ ಮಾಡ್ರಿ, ಮೂರು ಗಂಟೆ ಮ್ಯಾಲೆ ಬರ್ರಿ' ಎಂದು ಡೆಪ್ಯೂಟಿ ತಹಸೀಲ್ದಾರ್